ಅ) ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಡಿಯಲ್ಲಿ 1993-94ನೇ ಸಾಲಿಗೆ ಸೇಡಂ ಕ್ಷೇತ್ರದ ಶಾಸಕರು ಕೊಟ್ಟಿದ್ದ ಕಾಮಗಾರಿಯ ಪಟ್ಟಿಯನ್ನು ಬದಲಾವಣೆ ಮಾಡಿದ್ದರಿಂದ, ಈ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಲಿಲ್ಲ.

ಆ) ಬದಲಾವಣೆಗೆ ಪ್ರಸ್ತಾಪಿಸಿರುವ ಕಾಮಗಾರಿಗಳನ್ನು ಮಂಜೂರು ಮಾಡಿದ ನಂತರ ಅವುಗಳನ್ನು ಪ್ರಾರಂಭ ಮಾಡಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ನರಹರಿ ಬೆಟ್ಟವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡುವುದು

368 - ಶ್ರೀ ಎ. ರುಕ್ಕಯ್ಯ ಪೂಜಾರಿ (ವಿಟ್ಲ) : ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆ ನರಹರಿ ಬೆಟ್ಟವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಇದ್ದರೆ ಯಾವಾಗ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಓಂ ಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು) :

ಅ) ಹೌದು

ಆ) ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ ಈ ಸ್ಥಳವನ್ನು "ಬಿ" ಗುಂಪಿನಡಿಯಲ್ಲಿ ಸೇರಿಸಲಾಗಿದೆ. ಇಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಬಂಡವಾಳ ಹೂಡಿಕೆ ಮೇಲೆ ಶೇಕಡ 20 ಸಬ್ಸಿಡಿ ಹಾಗೂ ಇತರ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು.

ಶಿಗ್ಗಾಂವ ತಾಲ್ಲೂಕಿನ ಪ್ರವಾಸಿ ಅಭಿವೃದ್ಧಿ ಕೇಂದ್ರಗಳ ಬಗ್ಗೆ

620 - ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕ್ ಶ್ರೀ ಶರೀಫ್ ಶಿವಯೋಗಿ ಸುಕ್ಷೇತ್ರ ಶಿಶುವಿನಹಾಳ, ಇದನ್ನು ಪ್ರವಾಸಿ ಅಭಿವೃದ್ಧಿ ಕೇಂದ್ರವೆಂದು ಪರಿಗಣಿಸಲಾಗಿದೆಯೇ?

ಆ) ಶಿಗ್ಗಾಂವ ತಾಲ್ಲೂಕು ಬಾಡ ಸುತ ಕನಕದಾಸರು ಹುಟ್ಟಿದ ಕ್ಷೇತ್ರವನ್ನು ಪ್ರವಾಸಿ ಅಭಿವೃದ್ಧಿ ಕೇಂದ್ರವೆಂದು ಗುರುತಿಸಲಾಗಿದೆಯೇ?

ಇ) ಶಿಗ್ಗಾಂವ ತಾಲ್ಲೂಕ್ ಗಂಗೆ ಬಾವಿ ಸುಕ್ಷೇತ್ರ ಪ್ರವಾಸಿ ಅಭಿವೃದ್ಧಿ ಸ್ಥಳವಾಗಿ ಪರಿಗಣಿಸಲಾಗುವುದೇ?

ಈ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಓಂ ಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು) :

ಅ) ಹೌದು

ಆ) ಹೌದು

ಇ) ಹೌದು

ಈ) ಪ್ರವಾಸೋದ್ಯಮ ನೀತಿಯಲ್ಲಿ ಈ ಸ್ಥಳವನ್ನು "ಬಿ" ಗುಂಪಿನಡಿಯಲ್ಲಿ ಸೇರಿಸಲಾಗಿದೆ. ಖಾಸಗಿಯವರು ಈ ಸ್ಥಳದಲ್ಲಿ ಪ್ರವಾಸಿ ಸೌಲಭ್ಯವನ್ನು ನಿರ್ಮಿಸಲು ಮುಂದೆ ಬಂದವರಿಗೆ ಶೇಕಡ 20 ಸಬ್ಸಿಡಿಯನ್ನು ಮತ್ತು ಇತರೆ ರಿಯಾಯಿತಿಗಳನ್ನು ನೀಡಲಾಗುವುದು.

ಹೊಳೀ ನರಸೀಪುರಕ್ಕೆ ಬಸ್ ಡಿಪೋವನ್ನು ಮಂಜೂರು

644 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಳೆ ನರಸೀಪುರದಲ್ಲಿ ರಾಜ್ಯ ರಸ್ತೆ ಸಾರಿಗೆ ಡಿಪೋವನ್ನು 1994Ë95ರಲ್ಲಿ ಮಂಜೂರು ಮಾಡಲಾಗಿದೆಯೇ?

ಆ) ಇಲ್ಲವಾದಲ್ಲಿ ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು

ಆ) ಉದ್ಭವಿಸುವುದಿಲ್ಲ

ಆರ್.ಟಿ.ಒ. ಕಛೇರಿಯಲ್ಲಿ ದ್ವಿಚಕ್ರ ವಾಹನಗಳ ಲೈಸೆನ್ಸ್ ನೀಡಿಕೆ

362 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಜೇರಾದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992ರ ಜುಲೈನಿಂದ ಸೆಪ್ಟೆಂಬರ್ 92ರ ವರೆಗೆ ರಾಜಾಜಿನಗರ ಆರ್.ಟಿ.ಒ. ಕಛೇರಿಯಿಂದ ಎಷ್ಟು ದ್ವಿಚಕ್ರ ವಾಹನಗಳ ಲೈಸೆನ್ಸ್‌ಗಳ ಹಾಗೂ ಪ್ಲಾಸ್ಟಿಕ್ ಕಾರ್ಡ್‌ಗಳನ್ನು ನೀಡಲಾಗಿದೆ. (ಲೈಸೆನ್ಸ್ ಮತ್ತು ಪ್ಲಾಸ್ಟಿಕ್ ಕಾರ್ಡ್‌ಗಳನ್ನು ಪಡೆದವರ ಹೆಸರು ಮತ್ತು ನಂಬರುಗಳ ವಿವರಗಳನ್ನು ಒದಗಿಸುವುದು)

ಆ) ಆ ವರ್ಷದಲ್ಲಿ ಮೇಲ್ಕಂಡ ಕಛೇರಿಯಿಂದ ಬಂದ ಆದಾಯವೆಷ್ಟು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ರಾಜಾಜಿನಗರ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಛೇರಿಯಲ್ಲಿ ನೀಡಲಾದ ಡ್ರೈವಿಂಗ್ ಲೈಸೆನ್ಸ್ ಮತ್ತು ಪ್ಲಾಸ್ಟಿಕ್ ಕಾರ್ಡ್ ನೀಡಿದ ಬಗ್ಗೆ ಈ ಕೆಳಕಂಡ ವಿವರಗಳನ್ನು ಕೊಡಲಾಗಿದೆ.

ಮಾಹೆ		ದ್ವಿಚಕ್ರ ವಾಹನಗಳ ಡ್ರೈವಿಂಗ್ ಲೈಸೆನ್ಸ್	ದ್ವಿಚಕ್ರ ವಾಹನಗಳಿಗೆ ನೀಡಲಾದ ನೀಲಿ ಪ್ಲಾಸ್ಟಿಕ್ ಕಾರ್ಡ್‌ಗಳು
ಜುಲೈ	92	525	639
ಆಗಸ್ಟ್	92	447	531
ಸೆಪ್ಟೆಂಬರ್	92	460	499
ಒಟ್ಟು		**1432**	**1669**

ಆ) ಪಡೆದವರ ಹೆಸರು ಮತ್ತು ನಂಬರುಗಳ ವಿವರಗಳನ್ನು ಒದಗಿಸಲಾಗುವುದಕ್ಕೆ ಕಾಲಾವಕಾಶ ಬೇಕು.

1992-93ರ ವರ್ಷದಲ್ಲಿ ಸದರಿ ಕಛೇರಿಯಿಂದ ಬಂದ ರಾಜಸ್ವ ವಸೂಲಾತಿ ಒಟ್ಟು ರೂಪಾಯಿ 6,42,60,677-00